ಆರ್‌ಬಿಐ/2008–2009/121
ಉಲ್ಲೇಖ.ಡಿಜಿಬಿಎ.ಸಿಡಿಡಿ. ಸಂ. ಎಚ್– 1311/13.01.299/2008–09

ಅಗಸ್ಟ್ 5, 2008
ಶ್ರಾವಣ 14, 1930(ಎಸ್)

ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಸಹವರ್ತಿ ಬ್ಯಾಂಕುಗಳು
17 ರಾಷ್ಟ್ರೀಕೃತ ಬ್ಯಾಂಕುಗಳು
ಆಕ್‌ಸಿಸ್ ಬ್ಯಾಂಕ್ ಲಿ./ ಎಚ್‌ಡಿಎಫ್‌ಸಿ ಬ್ಯಾಂಕ್ ಲಿ./ ಐಸಿಐಸಿಐ ಬ್ಯಾಂಕ್ ಲಿ./ ಐಡಿಬಿಐ ಬ್ಯಾಂಕ್ ಲಿ./ಮತ್ತು ಎಸ್‌ಎಚ್‌ಸಿಐಎಲ್

ಮಾನ್ಯರೇ,

**<u>8% ಉಳಿತಾಯ(ತೆರಿಗೆ ಸಹಿತ) ಬಾಂಡುಗಳು 2003 – ಆದಾಯತೆರಿಗೆ ಕಾಯಿದೆ, 1961 – ಟಿಡಿಎಸ್</u>**

8% ಉಳಿತಾಯ(ತೆರಿಗೆ ಸಹಿತ) ಬಾಂಡುಗಳು – 2003, ಮೇಲೆ ಮೂಲದಲ್ಲಿ ತೆರಿಗೆ ಕಡಿತದ(ಟಿಡಿಎಸ್) ಅನ್ವಯಿಸುವಿಕೆ ಬಗ್ಗೆ ಸ್ಪಷ್ಟೀಕರಣವನ್ನು ನೀಡುವ, ದಿನಾಂಕ ಸಪ್ಟಂಬರ್ 19, 2007ರ ಉಲ್ಲೇಖ ಸಂಖ್ಯೆ ಡಿಜಿಬಿಎ.ಸಿಡಿಡಿ.ಸಂ. ಎಚ್–3024/ 13.01.299/2007–08ರ ನಮ್ಮ ಸುತ್ತೋಲೆ ಸಂ. ಆರ್‌ಬಿಐ/2007–08/141ಯನ್ನು ದಯವಿಟ್ಟು ನೋಡಿ. ಅವುಗಳಿಂದ ಮುಂದುವರಿದು, ಶೀರ್ಷಿಕೆ ಬಾಂಡುಗಳ ಮೇಲೆ ಟಿಡಿಎಸ್‌ನ ಅನ್ವಯಿಸುವಿಕೆಯ ಹೆಚ್ಚಿನ ಅಂಶಗಳ ಬಗ್ಗೆ ಸಿ.ಬಿ.ಡಿ.ಟಿ.ಯು ಒದಗಿಸಿದ ಸ್ಪಷ್ಟೀಕರಣವನ್ನು ಕೆಳಗೆ ತಿಳಿಸಲಾಗಿದೆ:

| ಕ್ರಮ ಸಂಖ್ಯೆ | ವಿಷಯ | ಟಿಪ್ಪಣಿ | | |
|---|---|---|---|---|
| 1. | ಟಿಡಿಎಸ್ ಅನ್ವಯಿಸಿದ 1.6.2007ರಂದುಮತ್ತು ಅಲ್ಲಿಂದ ಅಥವಾ ಆ ದಿನಾಂಕದ ಮುಂಚಿತವಾಗಿ ಖರೀದಿಸಿದ ಬಾಂಡುಗಳ ಮೇಲೆ ಟಿಡಿಎಸ್ ಕಡಿತಗೊಳಿಸುವ ಅಗತ್ಯವಿದೆಯೇ? | 2003ರ 8% ಉಳಿತಾಯ(ತೆರಿಗೆ ಸಹಿತ) ಬಾಂಡುಗಳ ಮೇಲೆ ಮೂಲದಲ್ಲಿ ತೆರಿಗೆ ಕಡಿತ 1.6.2007ರಿಂದ ಅನ್ವಯಿಸಿದೆ. 2003ರ 8% ಉಳಿತಾಯ(ತೆರಿಗೆ ಸಹಿತ) ಬಾಂಡುಗಳ ಮೇಲೆ, 1.6.2007ರಂದು ಅಥವಾ ನಂತರ, ಒಂದು ಆರ್ಥಿಕ ವರ್ಷದಲ್ಲಿ ಜಮಾ ಮಾಡಿದ ಅಥವಾ ಪಾವತಿಸಿದ, ಬಡ್ಡಿಯು ರೂ. 10,000/–ನ್ನು ಮೀರಿದರೆ ಟಿಡಿಎಸ್ ಪಾವತಿಸಬೇಕಾಗುತ್ತದೆ. ಆದ್ದರಿಂದ, ಹೂಡಿಕೆ ದಿನಾಂಕ ಪ್ರಸ್ತುತವೆನಿಸುವುದಿಲ್ಲ. ಟಿಡಿಎಸ್ ಪ್ರಸಕ್ತ ಹೂಡಿಕೆದಾರರಿಗೂ ಅನ್ವಯಿಸುತ್ತದೆ. | | |
| 2. | ವ್ಯಕ್ತಿಗಳು, ಹಿಂದು ಅವಿಭಾಜ್ಯ ಕುಟುಂಬಗಳು ಮತ್ತು ಸಂಸ್ಥೆಗಳಿಗೆ | ವಿವಿಧ ಪ್ರವರ್ಗಗಳ ವ್ಯಕ್ತಿಗಳಿಗೆ ಅನ್ವಯಿಸುವ ಟಿಡಿಎಸ್‌ದರ ಈ ಕೆಳಗಿನಂತಿದೆ: | | |
| | | ಸ್ವೀಕರಿಸುವವನು | ಭಾರತದ ನಿವಾಸಿ (ಟಿಡಿಎಸ್* ದರ) | ಭಾರತದಲ್ಲಿಅನಿವಾಸಿ (ಟಿಡಿಎಸ್* ದರ) |

<table>
<tr><td></td><td>ಸಂಬಂಧಿಸಿದಂತೆ ಯಾವ ದರದಲ್ಲಿ ಟಿಡಿಎಸ್ ಅನ್ವಯಿಸುತ್ತದೆ?</td><td>
<table>
<tr><td></td><td>1.6.2007 ರಿಂದ 31.3.2008ರ ಅವಧಿಗೆ</td><td>1.4.2008ರಿಂದ ಮುಂದೆ</td><td>1.6.2007ಕ್ಕೆ ಮೊದಲು ಅಥವಾ ನಂತರ</td></tr>
<tr><td>ಕಂಪೆನಿ</td><td>20%</td><td>20%</td><td>40%</td></tr>
<tr><td>ಕಂಪೆನಿಯೇತರ</td><td>20%</td><td>10%</td><td>30%</td></tr>
<tr><td colspan="4">*ಅನ್ವಯಿಸುವ ದರದಲ್ಲಿ ಮೇಲ್ತೆರಿಗೆ ಮತ್ತು ಉಪಕರವನ್ನು ಸೇರಿಸಬೇಕು</td></tr>
</table>
</td></tr>
<tr><td>3.</td><td>ಬಡ್ಡಿಯ ಮೊತ್ತವು ವಿನಾಯಿತಿ ಮಿತಿಯನ್ನು ಮೀರಿದಲ್ಲಿ ಮತ್ತು ತೆರಿಗೆ ವಿನಾಯಿತಿ ಯೋಜನೆಗಳಲ್ಲಿ ತೆರಿಗೆದಾರನ ಹೂಡಿಕೆಗಳಿಂದಾಗಿ ಅವನ ಒಟ್ಟು ಆದಾಯವು ಸಂಬಂಧಿತ ಆರ್ಥಿಕ ವರ್ಷದಲ್ಲಿ ತೆರಿಗೆಗೆ ಒಳಪಡುವುದಿಲ್ಲವೆಂದು ಘೋಷಿಸಿದ್ದಲ್ಲಿ ನಮೂನೆ 15ಜಿ, 15ಎಚ್‌ನ್ನು ಸ್ವೀಕರಿಸಬಹುದೇ?</td><td>1. (ಎ) ಅವನ ತೆರಿಗೆ ಲೆಕ್ಕಹಾಕಬೇಕಾದ ವರ್ಷದ ಹಿಂದಿನ ವರ್ಷದ ಅಂದಾಜು ಒಟ್ಟು ಆದಾಯದ ಮೇಲಿನ ತೆರಿಗೆಯು ಸೊನ್ನೆಯಾಗಿದ್ದಲ್ಲಿ<br>(ಬಿ) (i) ದೇಶೀ ಕಂಪೆನಿಗಳ ಲಾಭಾಂಶ ಹೊರತುಪಡಿಸಿ ಲಾಭಾಂಶ<br>(ii) ಭದ್ರತಾಪತ್ರಗಳ ಮೇಲಿನ ಬಡ್ಡಿ<br>(iii) ಭದ್ರತಾಪತ್ರೇತರ ಮೇಲಿನ ಬಡ್ಡಿ<br>(iv) ರಾಷ್ಟ್ರೀಯ ಉಳಿತಾಯ ಯೋಜನೆಯಡಿಯಲ್ಲಿ ಠೇವಣಿ ಮರುಪಾವತಿ ಮತ್ತು<br>(v) ತೆರಿಗೆಗೆ ಒಳಪಡದ, ಗರಿಷ್ಟ ಮೊತ್ತವನ್ನು ಮೀರದ ಘಟಕಗಳಿಗೆ ಸಂಬಂಧಿಸಿದ ಆದಾಯ<br>ಇವುಗಳಿಂದ ಒಟ್ಟು ಆದಾಯ<br>ಒಂದು ಕಂಪೆನಿಯಲ್ಲದ ಅಥವಾ ಫರ್ಮ್ ಅಲ್ಲದ ವ್ಯಕ್ತಿಗಳಿಂದ ನಮೂನೆ 15ಜಿಯಲ್ಲಿ ಘೋಷಣೆಯನ್ನು ಪಡೆಯಬಹುದು<br>2. (ಎ) ಅವನ ತೆರಿಗೆ ಲೆಕ್ಕಹಾಕಬೇಕಾದ ವರ್ಷದ ಹಿಂದಿನ ವರ್ಷದ ಅಂದಾಜು ಒಟ್ಟು ಆದಾಯದ ಮೇಲಿನ ತೆರಿಗೆಯು ಸೊನ್ನೆಯಾಗಿದ್ದಲ್ಲಿ– ಹಿಂದಿನ ವರ್ಷದ ಯಾವುದೇ ಸಮಯದಲ್ಲಿ 65ವರ್ಷ ಪೂರ್ತಿಯಾದ ಯಾವುದೇ ವ್ಯಕ್ತಿಗತ ಭಾರತೀಯ ನಿವಾಸಿಯಿಂದ ನಮೂನೆ 15ಎಚ್‌ನಲ್ಲಿ ಘೋಷಣೆಯನ್ನು ಸ್ವೀಕರಿಸಬಹುದು</td></tr>
<tr><td>4.</td><td>ಸಂಚಯಿತ ನಮೂನೆಯ ಹೂಡಿಕೆಗೆ ಸಂಬಂಧಿಸಿದಂತೆ ಬಡ್ಡಿಯನ್ನು ಪರಿಪಕ್ವತಾ ದಿನಾಂಕದಂದು ಪಾವತಿಸಲಾಗುತ್ತದೆ. ಇಂತಹ ಪ್ರಕರಣಗಳಲ್ಲಿ</td><td>ಸಂಚಯಿತ ನಮೂನೆಯ ಹೂಡಿಕೆಯಲ್ಲಿ, ಬಡ್ಡಿಯನ್ನು ಪ್ರತಿ ವರ್ಷ ಜಮಾ ಮಾಡಿದಲ್ಲಿ, ಆರ್ಥಿಕ ವರ್ಷದಲ್ಲಿ ಜಮಾ ಮಾಡುವ ಮೊತ್ತವು ನಿಗದಿತ ಮಿತಿ ರೂ. 10,000 ಮೀರಿದಲ್ಲಿ ತೆರಿಗೆ ಕಡಿತ ಮಾಡಬೇಕಾಗುತ್ತದೆ. ಆದುದರಿಂದ, ಸಂಚಯಿತ ನಮೂನೆಯ ಹೂಡಿಕೆಗಳಲ್ಲಿ ಬಡ್ಡಿಯು ಪರಿಪಕ್ವತೆಯ ಸಮಯದಲ್ಲಿ ಪಾವತಿಯಾಗುವುದಾದರೂ ಆರ್ಥಿಕ ವರ್ಷದಲ್ಲಿ ಜಮಾ ಮಾಡಿದ ಅಥವಾ ಪಾವತಿಸಿದ ಬಡ್ಡಿ ಮೊತ್ತವು ನಿಗದಿತ ಮಿತಿಯನ್ನು ಮೀರಿದಲ್ಲಿ ತೆರಿಗೆ ಕಡಿತ ಮಾಡಬೇಕಾಗುತ್ತದೆ.</td></tr>
</table>

| | | |
|---|---|---|
| | ಟಿಡಿಎಸ್ಸನ್ನು ಪರಿಪಕ್ವತಾ ದಿನಾಂಕದಂದು ಪಾವತಿಸಬೇಕಾದ ಒಟ್ಟು ಬಡ್ಡಿ ಮೇಲೆ ವಿಧಿಸಲಾಗುವುದೇ ಅಥವಾ ಭಾವಿತ ಪಾವತಿ ದಿನಾಂಕವನ್ನು ಪರಿಗಣಿಸಬೇಕೆ? ಅಂದರೆ, ಪ್ರತಿವರ್ಷ ಸಂಚಿತ ಬಡ್ಡಿ ಆಧಾರದಲ್ಲಿ ವಿಧಿಸಲಾಗುವುದೇ? | |
| 5. | ಅದಾಯ ತೆರಿಗೆ ವಿನಾಯತಿ ಪಡೆದ ಧಾರ್ಮಿಕ ಸಂಸ್ಥೆಗಳು ಮತ್ತು ನ್ಯಾಸಗಳ ಸಂದರ್ಭದಲ್ಲಿ ಅವುಗಳ ಧಾರ್ಮಿಕ ಸ್ವರೂಪದಿಂದಾಗಿಯೇ ಟಿಡಿಎಸ್‌ಗೆ ಅರ್ಹವಾಗುವುದೇ ಅಥವಾ ಆದಾಯ ತೆರಿಗೆ ಅಧಿಕಾರಿಯಿಂದ ವಿನಾಯಿತಿ ಪ್ರಮಾಣ ಪತ್ರಕ್ಕಾಗಿ ಒತ್ತಾಯಿಸಬೇಕೆ? | ಧಾರ್ಮಿಕ ಸಂಸ್ಥೆಗಳು ಮತ್ತು ನ್ಯಾಸಗಳ ಸಂದರ್ಭದಲ್ಲಿ, ಕಡಿಮೆ ದರದಲ್ಲಿ ಅಥವಾ ಶೂನ್ಯ ತೆರಿಗೆ ಕಡಿತಕ್ಕಾಗಿ, ಮೌಲ್ಯನಿರ್ಧರಣಾ ಅಧಿಕಾರಿಯಿಂದ ಅದಾಯ ತೆರಿಗೆ ಕಾಯಿದೆ ಪ್ರಕರಣ 197ರ ಪ್ರಕಾರ ಪ್ರಮಾಣಪತ್ರ ಅಗತ್ಯವಾಗಿದೆ.<br><br>ಟಿಡಿಎಸ್‌ಗೆ ಸಂಬಂಧಿಸಿದಂತೆ ಯಾವುದೇ ವಿಶೇಷ ಕಾರ್ಯವಿಧಾನ ಧಾರ್ಮಿಕ ಸಂಸ್ಥೆಗಳು ಮತ್ತು ನ್ಯಾಸಗಳ ಸಂದರ್ಭದಲ್ಲಿ ಒದಗಿಸಿರುವುದಿಲ್ಲ. |
| 6. | ದಿನಾಂಕ ಜೂನ್ 1, 2007ರಿಂದ ಅನ್ವಯವಾಗುವಂತೆ, ಒಂದು ಆರ್ಥಿಕ ವರ್ಷದಲ್ಲಿ 8%(ತೆರಿಗೆ ಸಹಿತ) ಬಾಂಡ್ಸ್ 2003ರ ತೆರಿಗೆ ಪಾವತಿ ರೂ. 10,000 ಮೀರಿದ ಮೊತ್ತಕ್ಕೆ ತೆರಿಗೆ ಕಡಿತ | ದಿನಾಂಕ 1.6.2007ರಿಂದ ಒಂದು ಆರ್ಥಿಕ ವರ್ಷದಲ್ಲಿ ಬಡ್ಡಿ ಪಾವತಿ ಅಥವಾ ಜಮಾ, ಯಾವುದು ಮೊದಲೋ ಅದು, ರೂ. 10,000 ಮೀರಿದಲ್ಲಿ ಟಿಡಿಎಸ್ ಕಡಿತ ಅಗತ್ಯವಾಗಿರುತ್ತದೆ. ಆದುದರಿಂದ, ಈ ನಿರ್ದಿಷ್ಟ ಪ್ರಕರಣದಲ್ಲಿ, ದಿನಾಂಕ 1.8.2007ರಂದು ಪಾವತಿಸಬೇಕಾದ ಅರ್ಧವಾರ್ಷಿಕ ಬಡ್ಡಿಯನ್ನು ದಿನಾಂಕ 1.6.2007ರಂದು ಅಥವಾ ಆ ನಂತರ ಪಾವತಿ ಅಥವಾ ಜಮಾ ಮಾಡಿದಲ್ಲಿ ಆ ರೀತಿ ಜಮಾ ಅಥವಾ ಪಾವತಿ ಆದ ಸಂದರ್ಭದಲ್ಲಿ, ಯಾವುದು ಮೊದಲೋ ಅದು, ಆಗ ಮೂಲದಲ್ಲಿ ತೆರಿಗೆ ಕಡಿತ ಅಗತ್ಯವಾಗಿದೆ. |

| | | |
|---|---|---|
| | ಅಗತ್ಯವಾಗಿದೆ. ದಿನಾಂಕ ಅಗಸ್ಟ್ 1, 2007ರಂದು ಪಾವತಿಸಬೇಕಾದ ಅರ್ಧ್ ವಾರ್ಷಿಕ ಬಡ್ಡಿ ದಿನಾಂಕ 1.2.2007ರಿಂದ ಜಮಾ ಆಗುತ್ತದೆ. ಈ ಪ್ರಕರಣಗಳಲ್ಲಿ 1.6.2007ರಿಂದ ಜಮಾ ಅಗುವ ಬಡ್ಡಿಯನ್ನು ಟಿಡಿಎಸ್‌ಗಾಗಿ ಪರಿಗಣಿಸಬೇಕೆ? | |

2. ಮೇಲೆ ತಿಳಿಸಿದ ಸ್ಪಷ್ಟೀಕರಣಗಳು ಮತ್ತು ಆದಾಯ ತೆರಿಗೆ ಕಾಯಿದೆ 1961ರ ಅನ್ವಯ ಶಿರೋನಾಮೆಯ ಬಾಂಡುಗಳ ಮೇಲೆ ಟಿಡಿಎಸ್ ಅನ್ವಯಿಸುವುದನ್ನು ಖಚಿತಪಡಿಸುವಂತೆ ಸೂಚಿಸಲಾಗಿದೆ. ಈ ಯೋಜನೆಯನ್ನು ಜಾರಿಗೊಳಿಸುವ ನಿಗದಿತ ಶಾಖೆಗಳಿಗೆ ಅಗತ್ಯ ಸೂಚನೆಗಳನ್ನು ನೀಡಬಹುದು. ಈ ಸುತ್ತೋಲೆಯನ್ನು ನಮ್ಮ ವೆಬ್‌ತಾಣ www.rbi.org.inನಲ್ಲೂ ಪಡೆಯಬಹುದು.

3. ದಯವಿಟ್ಟು ಸ್ವೀಕೃತಿಯನ್ನು ನೀಡಿ.

ನಿಮ್ಮ ವಿಶ್ವಾಸಿ

(ಡಾ. ಬಾಲು ಕೆ)
ಉಪ ಮಹಾ ಪ್ರಬಂಧಕರು